# ಮಡಕೆಯಲ್ಲಿ ‘ಮಡಿವಾಳ’ದ ಸಂಸಾರ







ಎಂ.ಆರ್.ಮಂಜುನಾಥ್

ಅಭಿವೃದ್ಧಿಯ ನೆಪದಲ್ಲಿ ಕಾಡು, ಗಿಡ, ಮರಗಳು ನಾಶವಾಗಿ ಕಾಂಕ್ರೀಟ್ ಕಾಡುಗಳು ತಲೆ ಎತ್ತುತ್ತಿವೆ. ಪಕ್ಷಿಗಳು ಮರದಲ್ಲಿ ಗೂಡು ಕಟ್ಟಿ ಸಂತೋಷದಿಂದ ಹಾರಾಡುತ್ತಾ, ಮರಿಗಳಿಗೆ ಗುಟುಕು ಕೊಟ್ಟು ಹೋಗುವುದು ಕಾಣದಾಗಿದೆ. ಆದರೆ, ಸದಾ ಮನುಷ್ಯರ ಹತ್ತಿರವೇ ಸುಳಿದಾಡುವ ಮಡಿವಾಳ ಹಕ್ಕಿ (ಇಂಡಿಯನ್ ರಾಬಿನ್) ಮನೆಯ ಆವರಣದಲ್ಲಿನ ಮಡಕೆಯಲ್ಲಿ ವಂಶಾಭಿವೃದ್ಧಿ ಮಾಡಿದ ಕ್ಷಣಗಳು ಇಲ್ಲಿವೆ.

ಕುರುಚಲು ಹಾಗೂ ಕಾಡು ಬಂಡೆಗಳ ಮಧ್ಯೆ ವಾಸಿಸುವ ಮಡಿವಾಳ ಹಕ್ಕಿ ಸಾಮಾನ್ಯವಾಗಿ ಏಪ್ರಿಲ್‌ನಿಂದ ಜೂನ್ ತಿಂಗಳ ಅವಧಿ ಇದರ ಸಂತಾನೋತ್ಪತ್ತಿ ಸಮಯ. ತನ್ನ ಕುಟುಂಬವನ್ನು ರಕ್ಷಿಸಿಕೊಳ್ಳಲು ಹಾತೊರೆಯುತ್ತಿರುವ ತುಂಬು ‘ಗರ್ಭಿಣಿ’ ವಿಧಿಯಿಲ್ಲದೆ ಮೈಸೂರಿನ ನಿವೇದಿತಾ ನಗರದ ಎಂಜಿನಿಯರ್ ಚಂದ್ರಶೇಖರ್ ಮನೆಯಲ್ಲಿರಿಸಿದ ಆಲಂಕಾರಿಕ ಮಡಕೆಯಲ್ಲಿ ಗೂಡು ಕಟ್ಟಿ, ಬಟ್ಟಲಿನ ಮಾದರಿಯಲ್ಲಿ ಹುಲ್ಲು ಇರಿಸಿ, ಮೊಟ್ಟೆ ಇಟ್ಟು ಮರಿ ಮಾಡಿತು. ನಿತ್ಯ ಮೂರು ಹೊತ್ತು ತನ್ನ ಪುಟ್ಟ ಮರಿಗಳಿಗೆ ಆಹಾರ ತಂದು ನೀಡಿ ಬೆಳೆಸಿದೆ. ಈ ದೃಶ್ಯಗಳು ನೋಡಲು ಕಣ್ಣಿಗೆ ಹಬ್ಬ.

ಸತತ 24 ದಿನ ಈ ದಿನಚರಿ ಮುಂದುವರೆದಿತ್ತು. ರೆಕ್ಕೆ ಬಲಿಯುತ್ತಿದ್ದಂತೆ ತನ್ನ ಕಂದಮ್ಮಗಳನ್ನು ಕರೆದುಕೊಂಡು ಆಗಸದತ್ತ ತಾಯಿ ಹಕ್ಕಿ ಹಾರಿ ಹೋದಾಗ ಒಂಥರಾ ಮನಸ್ಸಿಗೆ ಬೇಸರವಾಯಿತು. ಆದರೆ, ಪಕ್ಕಿಗಳಲ್ಲೂ ವಂಶ ಕುಡಿಗಳ ಬಗ್ಗೆ ಕಾಳಜಿ ಇದೆ ಎಂಬ ವಿಚಾರ ತಲೆಯಲ್ಲಿ ಬಂತು ಎಂದು ನೆನಪಿಸಿಕೊಂಡರು ಎಂಜಿನಿಯರ್ ಚಂದ್ರಶೇಖರ್.

**ಹಕ್ಕಿಯ ವಿಶೇಷತೆ:** ಈ ಪಕ್ಷಿಗಳು, ಎರಡು ಕಂದು ಚುಕ್ಕೆಗಳಿರುವ 2 ರಿಂದ 3 ಕೆನೆಬಣ್ಣದ ಮೊಟ್ಟೆ ಇಡುತ್ತವೆ. ಕಾವು ಕೊಟ್ಟು ಮರಿಮಾಡುತ್ತವೆ. ಸಂತಾನ ಋತುವಿನಲ್ಲಿ ಗಂಡು ಹಕ್ಕಿಗೆ ಎಲ್ಲಿಲ್ಲದ ಸಂಭ್ರಮ. ಸಾಮಾನ್ಯವಾಗಿ ನಿಂತ ಜಾಗದಲ್ಲಿ ನಿಲ್ಲದೆ, ಕುಪ್ಪಳಿಸುತ್ತ ಕೂತಾಗ ಬಾಲವನ್ನು ಆಗಾಗ ಅಲುಗಾಡಿಸುತ್ತವೆ. ಮೈಸೂರು ಮಾತ್ರವಲ್ಲದೇ ಬನ್ನೇರುಘಟ್ಟ, ಸಾವನದುರ್ಗ, ನಂದಿಬೆಟ್ಟ, ದೇವರಾಯನದುರ್ಗ ಭಾಗದಲ್ಲೂ ಕಾಣಸಿಗುತ್ತವೆ.



ಆ.19 ವಿಶ್ವ ಛಾಯಾಗ್ರಹಣ ದಿನ



# ರೈಲುಗಳ ಮಾಹಿತಿ

*ಪ್ಯಾಸೆಂಜರ್, **ಎಕ್ಸ್‌ಪ್ರೆಸ್, ***ಸೂಪರ್ ಫಾಸ್ಟ್



ಭದ್ರತಾ ಸಹಾಯ ವಾಣಿ 182, ಸೇವಾ ಸಹಾಯವಾಣಿ 183, ವಿಚಾರಣೆ 139

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಬೆಂಗಳೂರಿಗೆ | ಬೆಂಗಳೂರಿನಿಂದ | ಮೈಸೂರಿಗೆ |
|---|---|---|---|---|---|
| 22818/22817 | ಮೈಸೂರು-ಹೌರಾ***(ಸಾಪ್ತಾಹಿಕ) | ರಾತ್ರಿ12.30(ಸೋಮ) | ರಾತ್ರಿ 2.50 | ರಾತ್ರಿ 1 (ಭಾನು) | ರಾತ್ರಿ 3.45 |
| 12610/12609 | ಚೆನ್ನೈ ಎಕ್ಸ್‌ಪ್ರೆಸ್ | ಬೆಳಿಗ್ಗೆ 4.45 | ಬೆಳಿಗ್ಗೆ 7.45 | ರಾತ್ರಿ 8.10 | ರಾತ್ರಿ 11.30 |
| 16217/16218 | ಮೈಸೂರು-ಶಿರಡಿ**(ಸಾಪ್ತಾಹಿಕ) | ಬೆಳಿಗ್ಗೆ 5.30(ಸೋಮ) | ಬೆಳಿಗ್ಗೆ 8.27 | ರಾತ್ರಿ 3.30 | ಬೆಳಿಗ್ಗೆ 6 (ಗುರು) |
| 16518/16517 | ಕಣ್ಣೂರು ಎಕ್ಸ್‌ಪ್ರೆಸ್ | ಬೆಳಿಗ್ಗೆ 5.30 | ಬೆಳಿಗ್ಗೆ 8.20 | ರಾತ್ರಿ 8.30(ಸೋ., ಮಂ., ಭಾನು) | ರಾತ್ರಿ 11.05 |
| 56231/56232 | ಮೈಸೂರು-ಬೆಂಗಳೂರು* | ಬೆಳಿಗ್ಗೆ 6.10 | ಬೆಳಿಗ್ಗೆ 9:15 | ಬೆಳಿಗ್ಗೆ 9.20 | ಮಧ್ಯಾಹ್ನ12.35 |
| 17326/17325 | ಮೈಸೂರು-ಹುಬ್ಬಳ್ಳಿ (ವಿಶ್ವಮಾನವ) | ಬೆಳಿಗ್ಗೆ 5.50 | ಬೆಳಿಗ್ಗೆ 8.55 | ಸಂಜೆ 5.45 | ರಾತ್ರಿ 8.40 |
| 16215/16216 | ಚಾಮುಂಡಿ ಎಕ್ಸ್‌ಪ್ರೆಸ್** | ಬೆಳಿಗ್ಗೆ 6.45 | ಬೆಳಿಗ್ಗೆ 9.30 | ಸಂಜೆ 6.15 | ರಾತ್ರಿ 9.05 |
| 12578/12577 | ಮೈಸೂರು-ಭಾಗಮತಿ*(ಸಾಪ್ತಾಹಿಕ) | ಬೆಳಿಗ್ಗೆ 7.20 (ಶನಿ) | ಬೆಳಿಗ್ಗೆ 9.55 | ರಾತ್ರಿ 8.55 (ಗುರು) | ರಾತ್ರಿ 11.30 |
| 16229/16230 | ಮೈಸೂರು-ವಾರಾಣಸಿ** | ಬೆಳಿಗ್ಗೆ 7.20 | ಬೆಳಿಗ್ಗೆ 9.55 | ನಸುಕು 12.15 (ಭಾನು,ಮಂಗಳ) | ನಸುಕು 2.55 |
| 16023/16024 | ಮಾಲ್ಗುಡಿ ಎಕ್ಸ್‌ಪ್ರೆಸ್ | ಬೆಳಿಗ್ಗೆ 8.25 | ಬೆಳಿಗ್ಗೆ 10.55 | ಮಧ್ಯಾಹ್ನ 1.30 | ಸಂಜೆ 4 |
| 56281/56282 | ಬೆಂಗಳೂರು- ಚಾಮರಾಜನಗರ * | ಬೆಳಿಗ್ಗೆ 9.05 | ಮಧ್ಯಾಹ್ನ 12.15 | ಮಧ್ಯಾಹ್ನ 3.30 | ಸಂಜೆ 6.40 |
| 12975/12976 | ಮೈಸೂರು-ಜೈಪುರ***(ಗುರು,ಶನಿ) | ಬೆಳಿಗ್ಗೆ 10.30 | ಮಧ್ಯಾಹ್ನ 12.55 | ಮಧ್ಯಾಹ್ನ 1(ಬುಧ, ಶುಕ್ರ) | ಸಂಜೆ 3.45 |
| 12613/12614 | ಟಿಪ್ಪು ಎಕ್ಸ್‌ಪ್ರೆಸ್*** | ಬೆಳಿಗ್ಗೆ 11.30 | ಮಧ್ಯಾಹ್ನ 2.00 | ಮಧ್ಯಾಹ್ನ 3.15 | ಸಂಜೆ 5.45 |
| 17307/17308 | ಮೈಸೂರು-ಬಾಗಲಕೋಟೆ (ಬಸವ)** | ಮಧ್ಯಾಹ್ನ 1.30 | ಸಂಜೆ 4.30 | ಬೆಳಿಗ್ಗೆ 11.15 | ಮಧ್ಯಾಹ್ನ 1.50 |
| 12008/12007 | ಶತಾಬ್ದಿ ಎಕ್ಸ್‌ಪ್ರೆಸ್*** (ಬುಧವಾರ ಹೊರತುಪಡಿಸಿ) | ಮಧ್ಯಾಹ್ನ 2.15 | ಸಂಜೆ 4.15 | ಬೆಳಿಗ್ಗೆ 11 | ಮಧ್ಯಾಹ್ನ 1 |
| 16557/16558 | ರಾಜ್ಯರಾಣಿ ಎಕ್ಸ್‌ಪ್ರೆಸ್ | ಮಧ್ಯಾಹ್ನ 2.30 | ಸಂಜೆ 5.10 | ಬೆಳಿಗ್ಗೆ 10.30 | ಮಧ್ಯಾಹ್ನ 1.30 |
| 12786/12785 | ಕಾಚಿಗುಡ ಮೈಸೂರು ಎಕ್ಸ್‌ಪ್ರೆಸ್ | ಮಧ್ಯಾಹ್ನ 2.45 | ಸಂಜೆ 4.15 | ಬೆಳಿಗ್ಗೆ 6.40 | ಬೆಳಿಗ್ಗೆ 9.45 |
| 56237/56238 | ಮೈಸೂರು-ಬೆಂಗಳೂರು* | ಮಧ್ಯಾಹ್ನ 2.45 | ಸಂಜೆ 6 | ಸಂಜೆ 7 | ರಾತ್ರಿ 10.20 |
| 16232/16231 | ಮೈಸೂರು-ಮೈಲಾಡುತುರೈ** | ಸಂಜೆ 4.15 | ಸಂಜೆ 6.45 | ಬೆಳಿಗ್ಗೆ 5.50 | ಬೆಳಿಗ್ಗೆ 8.30 |
| 16535/16536 | ಮೈ -ಸೊಲ್ಲಾಪುರ(ಗೋಲ್‌ಗುಂಬಜ್) | ಮಧ್ಯಾಹ್ನ 3.30 | ಸಂಜೆ 6.50 | ಬೆಳಿಗ್ಗೆ 8.05 | ಬೆಳಿಗ್ಗೆ 11 |
| 16219/16220 | ಚಾಮರಾಜನಗರ-ತಿರುಪತಿ* | ಸಂಜೆ 5 | ರಾತ್ರಿ 8.15 | ಬೆಳಿಗ್ಗೆ 7.30 | ಬೆಳಿಗ್ಗೆ 10.40 |
| 16236/16235 | ಮೈಸೂರು-ಟುಟಿಕೋರಿನ್** | ಸಂಜೆ 6.05 | ರಾತ್ರಿ 9.05 | ಬೆಳಿಗ್ಗೆ 7 | ಬೆಳಿಗ್ಗೆ 9.55 |
| 16210/16209 | ಮೈಸೂರು- ಅಜ್ಮೀರ್ ** | ಸಂಜೆ 6.30 (ಮಂಗಳ, ಗುರು) | ರಾತ್ರಿ 9.30 | ರಾತ್ರಿ 3.30 (ಶುಕ್ರ, ಭಾನು) | ಬೆಳಿಗ್ಗೆ 6 |
| 16592/16591 | ಮೈಸೂರು-ಹುಬ್ಬಳ್ಳಿ (ಹಂಪಿ)** | ಸಂಜೆ 7.00 | ರಾತ್ರಿ 9.55 | ಬೆಳಿಗ್ಗೆ 6.20 | ಬೆಳಿಗ್ಗೆ 9.10 |
| 56234/56233 | ಮೈಸೂರು-ಬೆಂಗಳೂರು*(ಸಾಪ್ತಾಹಿಕ) | ಸಂಜೆ 7.10 | ರಾತ್ರಿ 10.25 | ಬೆಳಿಗ್ಗೆ 5 | ಬೆಳಿಗ್ಗೆ 8.00 |
| 22681/22682 | ಮೈಸೂರು-ಚೆನ್ನೈ*** | ರಾತ್ರಿ 8.10 (ಬುಧ) | ರಾತ್ರಿ 10.45 | ಬೆಳಿಗ್ಗೆ 5.25 (ಶುಕ್ರ) | ಬೆಳಿಗ್ಗೆ 8.00 |
| 16022/16021 | ಮೈಸೂರು-ಚೆನ್ನೈ (ಕಾವೇರಿ)** | ರಾತ್ರಿ 8.30 | ರಾತ್ರಿ 11.25 | ಬೆಳಿಗ್ಗೆ 3.50 | ಬೆಳಿಗ್ಗೆ 6.40 |
| 56263/56264 | ಮೈಸೂರು-ಬೆಂಗಳೂರು* | ರಾತ್ರಿ 11.55 | ಬೆಳಿಗ್ಗೆ 4:15 | ರಾತ್ರಿ 11.55 | ನಸುಕಿನ 4 |
| 06576/06575 | ಮೆಮು | ರಾತ್ರಿ 8.30 | ರಾತ್ರಿ 11.20 | ಸಂಜೆ 5.20 | ರಾತ್ರಿ 8.20 |

## ಮೈಸೂರು-ಅರಸೀಕೆರೆ ರೈಲುಗಾಡಿಗಳ ವೇಳಾಪಟ್ಟಿ

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಅರಸೀಕೆರೆಗೆ | ಅರಸೀಕೆರೆಯಿಂದ | ಮೈಸೂರಿಗೆ |
|---|---|---|---|---|---|
| 16206/16205 | ಮೈಸೂರು-ತಾಳಗುಪ್ಪಾ** | ಬೆಳಿಗ್ಗೆ 6.00 | ಬೆಳಿಗ್ಗೆ 8.48 | ಸಂಜೆ 6.50 | ರಾತ್ರಿ 10.15 |
| 11036/11035 | ಮೈಸೂರು-ದಾದರ್ (ಶರಾವತಿ)** | ಬೆಳಿಗ್ಗೆ 6.15 (ಭಾನು) | ಬೆಳಿಗ್ಗೆ.9.10 | ಸಂಜೆ 6.05 (ಶುಕ್ರ) | ರಾತ್ರಿ 9.40 |
| 17326/17325 | ಮೈಸೂರು- ಹುಬ್ಬಳ್ಳಿ (ಬೆಂಗಳೂರು ಮಾರ್ಗ) | ಬೆಳಿಗ್ಗೆ 6.10 | ಮಧ್ಯಾಹ್ನ 12.20 | ಮಧ್ಯಾಹ್ನ 1.15 | ರಾತ್ರಿ 8.40 |
| 56266/56265 | ಮೈಸೂರು-ಅರಸೀಕೆರೆ* | ಬೆಳಿಗ್ಗೆ 6.30 | ಬೆಳಿಗ್ಗೆ 10.40 | ಸಂಜೆ 5.30 | ರಾತ್ರಿ 9.25 |
| 16229/16230 | ಮೈಸೂರು-ಬಿಎಸ್‌ಬಿ | ಬೆಳಿಗ್ಗೆ 7.20 (ಮಂಗಳ/ಗುರು) | ಮಧ್ಯಾಹ್ನ 1.10 | ರಾತ್ರಿ 8.50 (ಸೋಮ/ಶನಿ) | ರಾತ್ರಿ 2.50 |
| 56270/56269 | ಮೈಸೂರು-ಶಿವಮೊಗ್ಗ* | ಬೆಳಿಗ್ಗೆ 10.20 | ಮಧ್ಯಾಹ್ನ 1.45 | ಮಧ್ಯಾಹ್ನ 12.30 | ಸಂಜೆ 4.30 |
| 16535/16536 | ಮೈಸೂರು-ಗೋಲಗುಂಬಜ್ (ಬೆಂಗಳೂರು ಮಾರ್ಗ) | ಮಧ್ಯಾಹ್ನ 3.30 | ರಾತ್ರಿ 9.45 | ಬೆಳಿಗ್ಗೆ 4.13 | ಬೆಳಿಗ್ಗೆ 11.00 |
| 56268/56267 | ಮೈಸೂರು-ಅರಸೀಕರೆ* | ಸಂಜೆ 6.20 | ರಾತ್ರಿ 10.40 | ಬೆಳಿಗ್ಗೆ 5 | ಬೆಳಿಗ್ಗೆ 9.30 |
| 16210/16209 | ಮೈಸೂರು-ಅಜ್ಮೀರ್ ಎಕ್ಸ್‌ಪ್ರೆಸ್ | ಸಂಜೆ 6.30 (ಮಂಗಳ/ಗುರು) | ರಾತ್ರಿ 12.45 | ರಾತ್ರಿ10.55(ಸೋಮ/ಶನಿ) | ಬೆಳಿಗ್ಗೆ 6.00 |
| 12781/12782 | ಸ್ವರ್ಣಜಯಂತಿ** | ರಾತ್ರಿ 8.10 (ಶುಕ್ರ) | ರಾತ್ರಿ 11.05 | ರಾತ್ರಿ 1.40 (ಬುಧ) | ನಸುಕಿನ 4.55 |
| 17301/17302 | ಮೈಸೂರು-ಶಿವಮೊಗ್ಗ (ಧಾರವಾಡ) | ರಾತ್ರಿ 10.30 | ರಾತ್ರಿ 1.35 | ರಾತ್ರಿ 3.05 | ಬೆಳಿಗ್ಗೆ 7 |
| 56216/56215 | ಮೈಸೂರು-ಶ್ರವಣಬೆಳಗೊಳ* | ಬೆಳಿಗ್ಗೆ 11.05 | ಮಧ್ಯಾಹ್ನ1.40(ಶ್ರ.ಗೊಳ) | ಸಂಜೆ 4.20 (ಶ್ರ.ಗೊಳ) | ರಾತ್ರಿ 7.25 |

## ಮೈಸೂರು-ಚಾಮರಾಜನಗರ ಮಾರ್ಗ

| ಗಾಡಿ ಸಂಖ್ಯೆ | ಮೈಸೂರಿನಿಂದ | ನಂಜನಗೂಡಿಗೆ | ಚಾಮರಾಜನಗರಕ್ಕೆ | ಚಾ.ರಾಜನಗರದಿಂದ | ನಂಜನಗೂಡಿಗೆ | ಮೈಸೂರಿಗೆ |
|---|---|---|---|---|---|---|
| 56202/56281 | ಬೆಳಿಗ್ಗೆ 5 | ಬೆಳಿಗ್ಗೆ 5.39 | ಬೆಳಿಗ್ಗೆ 6.40 | ಬೆಳಿಗ್ಗೆ 7.00 | ಬೆಳಿಗ್ಗೆ 7.55 | ಬೆಳಿಗ್ಗೆ 9.00 |
| 56204/56203 | ಬೆಳಿಗ್ಗೆ 7.20 | ಬೆಳಿಗ್ಗೆ 8 | ಬೆಳಿಗ್ಗೆ 9.10 | ಬೆಳಿಗ್ಗೆ 10.40 | ಬೆಳಿಗ್ಗೆ 11.30 | ಮಧ್ಯಾಹ್ನ 12.25 |
| 56206/56205 | ಬೆಳಿಗ್ಗೆ 9.10 | ಬೆಳಿಗ್ಗೆ 9.45 ನಂಜನಗೂಡು ಮಾತ್ರ | ಬೆಳಿಗ್ಗೆ 10 | ಬೆಳಿಗ್ಗೆ 11.00 | | |
| 56220/16219 | ಬೆಳಿಗ್ಗೆ 10.30 | ಬೆಳಿಗ್ಗೆ 11.13 | ಮಧ್ಯಾಹ್ನ 12.30 | ಮಧ್ಯಾಹ್ನ 3:10 | ಮಧ್ಯಾಹ್ನ 3.40 | ಸಂಜೆ 4.55 |
| 56210/56209 | ಮಧ್ಯಾಹ್ನ 12.30 | ಮಧ್ಯಾಹ್ನ 1.10 | ಮಧ್ಯಾಹ್ನ 2.15 | ಸಂಜೆ 6 | ಸಂಜೆ 6.43 | ಸಂಜೆ 7.50 |
| 56208/56207 | ಮಧ್ಯಾಹ್ನ 2.50 | ಮಧ್ಯಾಹ್ನ 3.35 | ಸಂಜೆ 4.40 | ಸಂಜೆ 5 | ಸಂಜೆ 5.40 | ಸಂಜೆ 6.35 |
| 56282/56201 | ಸಂಜೆ 6.45 | ಸಂಜೆ 7.29 | ರಾತ್ರಿ 8.35 | ರಾತ್ರಿ 8.50 | ರಾತ್ರಿ 9.35 | ರಾತ್ರಿ 10.30 |

## ಮುನ್ನೋಟ

### ಶನಿವಾರ 17, ಆಗಸ್ಟ್

**ಗಾಯನ ಕಛೇರಿ**

ಕುಮಾರವ್ಯಾಸ ಗುರುಕುಲ ಮತ್ತು ಕಾವ್ಯರಂಜನಿ ಸಭಾದಿಂದ ಶನಿವಾರ (ಆ.17) ವಿದುಷಿ ಗೌರಮ್ಮ ಶ್ರೀನಿವಾಸಮೂರ್ತಿ ಸಂಸ್ಮರಣೆ ಕಾರ್ಯಕ್ರಮದಲ್ಲಿ ಸಂಜೆ 6ಕ್ಕೆ ಕೀರ್ತನಾ ಶಿವಶಂಕರ್ ಅವರಿಂದ ಗಾಯನ. ಸಂಜೆ 6.15ಕ್ಕೆ ಮಾನಸನಯನ ಅವರಿಂದ ಗಾಯನ. ಸುಮಂತ್ ಮಂಜುನಾಥ್ (ಪಿಟೀಲು), ಎ.ರಾಧೇಶ್ (ಮೃದಂಗ), ವಿ.ಎಸ್.ರಮೇಶ್ (ಮೋರ್ಚಿಂಗ್). ಸ್ಥಳ ವಿವೇಕಾನಂದನಗರ ಬ್ರಾಹ್ಮಣ ಸಭಾ, ಶಂಕರ ಪ್ರರ್ಥನಾ ಮಂದಿರ, ಶ್ರೀರಾಂಪುರ 2ನೇ ಹಂತ.

### ಶನಿವಾರ ಮತ್ತು ಭಾನುವಾರ

**ನಾಟಕ ಪ್ರದರ್ಶನ**

ಮೈಸೂರು ಮೈಮ್ ಟೀಮ್ ವತಿಯಿಂದ ಆ. 17 ಮತ್ತು 18ರಂದು ಕಿರುಮಂದಿರದಲ್ಲಿ ಸಂಜೆ 6.45ಕ್ಕೆ ‘ದಿ ಕೋರ್ಟ್ ಮಾರ್ಷಲ್’ ನಾಟಕ ಪ್ರದರ್ಶನಗೊಳ್ಳಲಿದೆ. ಎಸ್.ರಾಮು ನಿರ್ದೇಶನ ಮಾಡಿದ್ದಾರೆ.

**ಶಾಸ್ತ್ರೀಯ ಸಂಗೀತ**



ಸಂಗೀತಾ ಕಟ್ಟಿ

ರಾಘವೇಂದ್ರಸ್ವಾಮಿ ಸೇವಾ ಸಮಿತಿ ರಾಘವೇಂದ್ರ ಗುರು ಸಾರ್ವಭೌಮರ 348ನೇ ಆರಾಧನಾ ಮಹೋತ್ಸವ ಅಂಗವಾಗಿ ಆ.17ಕ್ಕೆ ವಿದುಷಿ ಸಂಗೀತಾ ಕಟ್ಟಿ ಕುಲಕರ್ಣಿ ಅವರಿಂದ ದಾಸವಾಣಿ, ಆ.18ಕ್ಕೆ ವಿದ್ವಾನ್ ಹೇರಂಭ, ಹೇಮಂತ ಅವರಿಂದ ಕೊಳಲು ವಾದನ. ಆ.19ಕ್ಕೆ ವಿದುಷಿ ಎಸ್.ಹಿರಣ್ಮಯಿ ಅವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಪ್ರತಿ ದಿನ ಸಂಜೆ 6.30.

**ಐ ಡ್ರೀಮ್ ಬಿಫೋರ್...**

ರಂಗಾಯಣ, ನಾಟ್ಯ ಶಿವ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಆ.17ಕ್ಕೆ ಭೂಮಿಗೀತ ರಂಗಮಂದಿರದಲ್ಲಿ ಸಂಜೆ 6.30ಕ್ಕೆ ‘ಐ ಡ್ರೀಮ್ ಬಿಫೋರ್ ಐ ಟೇಕ್ ದಿ ಸ್ಟ್ಯಾಂಡ್’ ನಾಟಕ ಪ್ರದರ್ಶನ ಆಯೋಜಿಸಲಾಗಿದೆ. ಮೂಲ: ಅರ್ಲೆನ್ ಹಟನ್, ಕನ್ನಡಕ್ಕೆ- ಪ್ರತಿಭಾ ನಂದಕುಮಾರ್, ನಿರ್ದೇಶನ-ಸಾಲಿಯಾನ್ ಉಮೇಶ್ ನಾರಾಯಣ್.

**‘ನೃತ್ಯ ವೈಭವ’**



ಶ್ರೀಕೃಷ್ಣಧಾಮ ವತಿಯಿಂದ ಪೇಜಾವರ ವಿಶ್ವೇಶತೀರ್ಥರ 81ನೇ, ವಿಶ್ವಪ್ರಸನ್ನತೀರ್ಥರ 32ನೇ ಚಾತುರ್ಮಾಸ್ಯ ಪ್ರಯುಕ್ತ ಆ.17ಕ್ಕೆ ‘ದಾಸ ಕುಸುಮಾಂಜಲಿ’ ಸಂಗೀತ ಕಾರ್ಯಕ್ರಮ. ಗಾಯನ-ಭೂಮಿಕಾ, ಅಶ್ವಿನಿಕುಮಾರ್, ಪ್ರವೀಣ್ ಜಾರಡಗಿ. ಆ.18ಕ್ಕೆ ನಾಗಲಕ್ಷ್ಮೀ ನಾಗರಾಜನ್ ಹಾಗೂ ತಂಡದವರಿಂದ ‘ನೃತ್ಯ ವೈಭವ’.

ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ. ಪ್ರತಿದಿನ ಸಂಜೆ 5.

# ನಚಿಕೇತನು ಕೇಳಿದ ಮೊದಲ ವರ

ಡಾ.ಕೆ.ಎಸ್. ಕಣ್ಣನ್



ಕಠೋಪನಿಷತ್ತಿನಲ್ಲಿ ನಚಿಕೇತನ ಕಥೆ ಬರುತ್ತದೆ. ಅಲ್ಲಿ ತಂದೆ ವಾಜಶ್ರವಸನು ಪುತ್ರನಾದ ನಚಿಕೇತನನ್ನು ಯಮನ ಬಳಿಗೆ ಕಳುಹಿಸಿಕೊಡುತ್ತಾನಷ್ಟೆ. ಯಮನನ್ನು ಭೇಟಿಯಗಲು ಮೂರು ದಿನಗಳಿಂದ ಕಾದಿದ್ದ ಆ ಬಾಲಕನಲ್ಲಿಗೆ ಬಂದ ಯಮನು ಆತನಲ್ಲಿ ಕ್ಷಮೆ ಯಾಚಿಸಿದನು! ‘ಅಯ್ಯಾ, ನಮಸ್ಕಾರಕ್ಕೆ ಯೋಗ್ಯನಾದ ಅತಿಥಿಯೇ! ಮೂರು ರಾತ್ರಿ ನಿರಾಹಾರನಾಗಿ ನನ್ನ ಮನೆಯಲ್ಲಿ ಉಳಿದುಕೊಂಡಿದ್ದೀಯೆ. ನಿನಗೆ ನಮಃ. ಮೂರು ರಾತ್ರಿಗಳಿಗೆ ಪ್ರತಿಯಾಗಿ ಮೂರು ವರಗಳನ್ನು ಕೇಳಿಕೋ’ ಎಂದನು.

‘ನನ್ನ ತಂದೆಗೆ ಕಳವಳ ಹೋಗಲಿ. ಆತನಿಗೆ ಒಳ್ಳೆಯ ಮನಸ್ಸು ಉಂಟಾಗಲಿ. ನನ್ನ ಮೇಲಿನ ಕೋಪವು ಹೋಗಲಿ. ನಾನು ಹಿಂದಿರುಗಿದಾಗ ಆತನು ನನ್ನನ್ನು ಗುರುತಿಸಿ ಮಾತನಾಡಿಸುವಂತಾಗಲಿ. ಇದು ನಾ ಕೇಳುವ ಮೊದಲ ವರ’ ಎಂದ ನಚಿಕೇತ.

‘ನಿನ್ನ ತಂದೆ ಮೊದಲಿನಂತೆಯೇ ಆಗುವನಯ್ಯ! ನಿನ್ನನ್ನು ಕಾಣುತ್ತಲೇ ಗುರುತಿಸುವನು. ಆತನ ಕೋಪವೆಲ್ಲ ಕಳೆದುಹೋಗುವುದು. ರಾತ್ರಿ ಸುಖವಾಗಿ ನಿದ್ರೆ ಮಾಡುವನು’ ಎಂದನು ಯಮ.

‘ನನಗೆ ಒಂದು ದೊಡ್ಡ ಲಾಭವಾಗಬೇಕು’ – ಎಂದಲ್ಲ ನಚಿಕೇತ ಕೇಳುವುದು. ಮೊದಲು ತನ್ನ ತಂದೆಗೆ ಒಳ್ಳೆಯದಾಗಬೇಕೆಂದು: ‘ತಂದೆಯ ಕೋಪ-ಕಳವಳ ಕಳೆದು, ಆತ ಸುಮನಸ್ಕನಾಗಬೇಕು’ ಎಂದು! ನಚಿಕೇತನು ಮುಂದೆ ಆತ್ಮವಿದ್ಯೆಯನ್ನೇ ಕೇಳಿ ಪಡೆಯುವನಾದರೂ ಅದಕ್ಕಾಗಿ ಐಹಿಕವಾದ ಸುಖವನ್ನೆಲ್ಲ ಬಿಡಲಿಲ್ಲ. ತಾನು ಮಾತ್ರವಲ್ಲ, ತನಗೆ ಸೇರಿದವರೂ ಸುಖ- ನೆಮ್ಮದಿಗಳನ್ನು ಕಾಣಬೇಕೆಂಬುದು ಆತನ ಆಶಯ.

‘ಸದುದ್ದೇಶದಿಂದ ತಾನಿತ್ತ ಸಲಹೆಯನ್ನು ತಿರಸ್ಕರಿಸಿದನಲ್ಲವೆ, ತನ್ನ ತಂದೆ? ಅವನೂ ಪರಿಭವಪಡಲಿ’ ಎಂದು ಭಾವಿಸುವವನಲ್ಲ, ನಚಿಕೇತ. ತಂದೆಯು ತನ್ನ ವರ್ತನೆಗೆ ತಾನೇ ಪಶ್ಚಾತ್ತಾಪವನ್ನು ಪಡುವವನು ಎಂಬುದನ್ನೂ ಆತ ಬಲ್ಲ.

ನಾವು ಮತ್ತು ನಮ್ಮವರು- ಎಲ್ಲ ಸೇರಿ ಒಂದು ದೊಡ್ಡ ವೃಕ್ಷದಂತೆ. ‘ವೃಕ್ಷದ ಯಾವುದೇ ಶಾಖೆಗೆ ಕಾಯಿಲೆ ತಗುಲಿದರೂ ಅದು ಮಿಕ್ಕ ಶಾಖೆಗಳ ಮೇಲೂ ಪರಿಣಾಮ ಬೀರುವಂತಹುದೇ’ ಎಂಬ ತತ್ತ್ವವನ್ನು ಶ್ರೀರಂಗಮಹಾಗುರುಗಳು ಪ್ರತಿಪಾದಿಸುತ್ತಿದ್ದರು.

ಧನಸಂಪಾದನೆ-ಕೀರ್ತಿಸಂಪಾದನೆಗಳಿಗಿಂತ ಮನಸ್ಸಿನ ನೆಮ್ಮದಿಯ ಸಂಪಾದನೆ ಮುಖ್ಯ. ‘ತನ್ನ ತಂದೆಗೆ ನೆಮ್ಮದಿಯೊದಗಲಿ’ ಎಂದೇ ನಚಿಕೇತನು ಕೇಳಿಕೊಳ್ಳುವುದು. ಜೀವನದಲ್ಲಿ ತಾನು-ತನ್ನವರೆಂಬ ಸ್ವಸುಖ-ಪರಸುಖಗಳೂ ಅವಶ್ಯ. ಇದು ಇಹ-ಸುಖ. ಇಷ್ಟಕ್ಕೇ ನಿಲ್ಲುವುದೂ ಅಲ್ಲ. ಇಹಸುಖದ ಜೊತೆಗೆ ಪರಸುಖವೂ ಮುಖ್ಯ – ಎಂಬುದನ್ನು ಮನಗಾಣಿಸುತ್ತದೆ, ಈ ಉಪನಿಷತ್ತಿನ ಈ ಸರಳ-ಸುಭಗ ಪ್ರಸಂಗ: ಪರವು ಪ್ರಧಾನ, ಆದರೆ ಇಹವು ಅಮುಖ್ಯವಲ್ಲ.



# ಆರ್ಟಿಕ್ಯುಲೇಟ್ ನೃತ್ಯೋತ್ಸವ ನಾಳೆ

ಆರ್ಟಿಕ್ಯುಲೆಟ್ ಟ್ರಸ್ಟ್ ಫಾರ್ ಆರ್ಟ್ಸ್ ವತಿಯಿಂದ ಕುವೆಂಪುನಗರ ಆದಿಚುಂಚನಗಿರಿ ರಸ್ತೆಯಲ್ಲಿರುವ ವೀಣೆ ಶೇಷಣ್ಣ ಭವನದಲ್ಲಿ ಭಾನುವಾರ (ಆ.18) ಆರ್ಟಿಕ್ಯುಲೇಟ್ ನೃತ್ಯೋತ್ಸವ ಆಯೋಜಿಸಲಾಗಿದೆ.

ಬಿ.ನಾಗರಾಜ್ ಸಾರಥ್ಯದಲ್ಲಿ ಸಂಯೋಜನೆಗೊಂಡಿರುವ ನೃತ್ಯೋತ್ಸವದಲ್ಲಿ ಪುತ್ತೂರಿನ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯ ದೀಪಕ್ ಕುಮಾರ್ ಹಾಗೂ ಪ್ರೀತಿಕಲಾ ದ್ವಂದ್ವ ಭರತನಾಟ್ಯ ಪ್ರಸ್ತುತಪಡಿಸಲಿದ್ದಾರೆ.

ಸ್ವಿಜರ್‌ಲೆಂಡ್ ಓಂಕಾರ್ ಸ್ಕೂಲ್ ಆಫ್ ಇಂಡಿಯನ್ ಡಾನ್ಸ್‌ನ ಲಯೇಟೀಟಿಯಾ ಸಿಯಿಫರ್ಟ್ ಏಕವ್ಯಕ್ತಿ ಭರತನಾಟ್ಯ ಪ್ರದರ್ಶಿಸಲಿದ್ದಾರೆ. ಬೆಂಗಳೂರಿನ ಕಲಾಕುಟೀರಂ ಸ್ಕೂಲ್ ಆಫ್ ಡಾನ್ಸ್‌ನ ಸ್ಫೂರ್ತಿ ಭರತನಾಟ್ಯ ಪ್ರಸ್ತುತಪಡಿಸಲಿದ್ದಾರೆ. ಪುಣೆಯ ಅಮೀನಾ ಜಗದೀಶ್ ಪಠಾಣ್‌ಕರ್ ಕಥಕ್ ಪ್ರದರ್ಶಿಸಲಿದ್ದಾರೆ.

ಪ್ರತಿ ತಿಂಗಳ 3ನೇ ಭಾನುವಾರ ಭಾರತೀಯ ಶಾಸ್ತ್ರೀಯ ನೃತ್ಯ ಪ್ರಕಾರಗಳಿಗೆ ಆರ್ಟಿಕ್ಯುಲೇಟ್‌ನಲ್ಲಿ ವೇದಿಕೆ ಕಲ್ಪಿಸಲಾಗುತ್ತದೆ.

ಸಂಜೆ 6ಗಂಟೆಗೆ ನಡೆಯುವ ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ.